Shikshan Sanshodhan : Journal of Arts, Humanities and Social Sciences ISSN: 2581-6241 Volume - 3, Issue - 6, Nov-Dec – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 02/12/2020 Accepted on : 18/12/2020 Publication Date: 30/12/2020

# ಕೊಳ್ಳೇಗಾಲ ಪ್ರದೇಶದ ಮಾರಿಕುಣಿತ : ಒಂದು ಜಾನಪದೀಯ ಅಧ್ಯಯನ

**ಸತ್ಯಶೀಲ ಜಿ.ಎಂ**
ಸಂಶೋಧನಾ ವಿದ್ಯಾರ್ಥಿ , ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳಗಂಗೋತ್ರಿ,, ಮಂಗಳೂರು ವಿಶ್ವವಿದ್ಯಾನಿಲಯ
ಇ-ಅಂಚೆ : sathyasheela0806@gmail.com

***Abstract:*** *ಈ ಲೇಖನದಲ್ಲಿ ಕೊಳ್ಳೇಗಾಲದ ಕುಣಿತವೆಂದೆ ಜನಪ್ರಿಯತೆಯನ್ನು ಪಡೆದಿರುವ ಮಾರಿ ಕುಣಿತದ ಬಗ್ಗೆ ಬೆಳಕನ್ನು ಚೆಲ್ಲುತ್ತದೆ. ಇದರಲ್ಲಿ ಶ್ರೀಬಾಲಗೌರಿಯು ಮಾರಮ್ಮನಾದ ಬಗೆ, ನಂತರ ಗ್ರಾಮದೇವತೆಯಾಗಿದ್ದು, ಮಾರಮ್ಮನ ಹಬ್ಬದ ಆಚರಣೆ, ಈ ಆಚರಣೆಗಾಗಿಯೇ ಹುಟ್ಟಿಕೊಂಡ ಮಾರಿಕುಣಿತದ ಪ್ರಖ್ಯಾತಿಯನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.*

***Key Words:*** ಕೊಳ್ಳೇಗಾಲ, ಮಾರಿಕುಣಿತ, ಜನಪದ ಕಲೆ, ಚಾಮರಾಜನಗರ.

ಚಾಮರಾಜನಗರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಕೊಳ್ಳೇಗಾಲವು ಒಂದು. ನಗರಕ್ಕಿಂತ ವಿಸ್ತಾರ ಪ್ರದೇಶದಲ್ಲಿ, ಜನಸಂಖ್ಯೆಯಲ್ಲಿ ದೊಡ್ಡದಾದ ಈ ತಾಲ್ಲೂಕು ಮಂಡ್ಯ, ಬೆಂಗಳೂರು ಜಿಲ್ಲೆಗಳ ಗಡಿ ಪ್ರದೇಶವನ್ನು ಹೊಂದಿದೆ. ಹಿಂದೆ ಮೈಸೂರು ಜಿಲ್ಲೆ ಪೂರ್ವಭಾಗದ ಒಂದು ತಾಲ್ಲೂಕಾಗಿತ್ತು. 1997ರ ನಂತರ ಚಾಮರಾಜನಗರ ಜಿಲ್ಲಾ ವ್ಯಾಪ್ತಿಗೆ ಸೇರ್ಪಡೆಗೊಂಡಿತು. ಕೊಳ್ಳೇಗಾಲವು ತನ್ನದೇ ಆದ ಪ್ರಾಚೀನ ಇತಿಹಾಸವನ್ನು ಒಳಗೊಂಡಿದೆ. ಹಿಂದೆ ಕೌಹಳ (ಕೊಹಳ) ಗಾಲವ ಎಂಬ ಋಷಿಗಳು ಈ ಪ್ರದೇಶದಲ್ಲಿ ವಾಸಿಸುತಿದ್ದರೆಂದೂ ಅವರಿಂದಾಗಿ ಈ ಪ್ರದೇಶಕ್ಕೆ 'ಕೊಳ್ಳೇಗಾಲ'ವೆಂಬ ಹೆಸರು ಬಂತೆಂಬ ಐತಿಹ್ಯವಿದೆ. ಜನರ ಬಾಯಿಂದ ಬಾಯಿಗೆ ಇದು ಕೋಳಿಗಾಲ, ಕೋಳೆಗಾಲ, ಕೊಳ್ಳೇಗಾಲವಾಗಿ ಜನಜನಿತವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೌಹಳ-ಗಾಲವ ಎಂಬ ಮುನಿಗಳು ಇಲ್ಲಿ ತಪಸ್ಸನ್ನಾಚರಿಸಿದರ ಬಗ್ಗೆ ಉಲ್ಲೇಖವಿದೆ. ಅಲ್ಲದೆ ಈ ಪ್ರದೇಶವು ಮಾಯ, ಯಕ್ಷಿಣಿ, ಮಾಟ-ಮಂತ್ರ-ಮೋಡಿ ವಿದ್ಯೆಯಲ್ಲಿ ಬಹಳ ಮುಂದುವರೆದಿತ್ತೆಂಬ ವಿಚಾರವು ತಿಳಿದು ಬರುತ್ತದೆ. ಅದಕ್ಕೆ ಪುಷ್ಟೀಕರಿಸುವಂತೆ ಇಲ್ಲಿನ ಸಾಂಸ್ಕೃತಿಕ ನಾಯಕರಾದ ಮಾದೇಶ್ವರ, ಮಂಟೇಸ್ವಾಮಿಯವರ ಪವಾಡಗಳೇ ಸಾಕ್ಷಿಭೂತವಾಗಿದೆ. ಇಲ್ಲಿನ ಹಬ್ಬ ಹರಿದಿನಗಳು ಸರ್ವೆ ಸಾಮಾನ್ಯವಾದರೂ, ಆಚರಣೆಯ ಭಾಗವು ವಿಶಿಷ್ಟ ರೀತಿಯದಾಗಿದೆ. ಹಬ್ಬ-ಆಚರಣೆ, ಉತ್ಸವ, ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳುವ ಪ್ರಮುಖ ಕಲೆಗಳಲ್ಲಿ ಕಂಸಾಳೆಯವರು, ಗೊರವರು, ಡೊಳ್ಳುಕುಣಿತದವರು, ತಂಬೂರಿಯವರು, ನೀಲಗಾರರು, ದಾಸಯ್ಯನವರು ಮಹತ್ವವಾದ ಸ್ಥಾನವನ್ನು ಪಡೆದು ಕೊಂಡಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾರಿಕುಣಿತವು ಕೊಳ್ಳೇಗಾಲ ಪ್ರದೇಶದ ಪ್ರಾದೇಶಿಕ ಕಲೆಗಳಲ್ಲಿ ಒಂದಾಗಿದೆ. ಚಾಮರಾಜನಗರ ಜಿಲ್ಲೆಯ ಬಹುಪಾಲು ಹಳ್ಳಿಗಳಲ್ಲಿ ಈ ಕುಣಿತವನ್ನು ಕಾಣಬಹುದಾದರೂ, ಬಹುಮಟ್ಟಿಗೆ ಕೊಳ್ಳೇಗಾಲದಲ್ಲಿ ಈ ಕುಣಿತದ ವ್ಯಾಪ್ತಿ ಬಹುತೇಕ ಗ್ರಾಮಗಳನ್ನೇ ವಿಸ್ತರಿಸಿಕೊಂಡಿದೆ. ಸಾಮಾನ್ಯವಾಗಿ ಮಾರಿಯ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸಲಾಗುವ ಈ ಕುಣಿತವನ್ನು 'ಮಾರಿಕುಣಿತ' ಎಂದು ಕರೆಯುವ ವಾಡಿಕೆ ರೂಢಿಯಲ್ಲಿದೆ. ಮಾರಿ ಊರನ್ನು ಕಾಯುವ ಗ್ರಾಮದೇವತೆ, ಊರಲ್ಲಿ ಸಂಭವಿಸುವ ಅವಘಡಗಳಿಗೆ ಮಾರಿಯೇ ಶಕ್ತಿ. ಆದ್ದರಿಂದ ನಮ್ಮ ಜನಪದರಿಗೆ ಮಾರಿಯ ಮೇಲೆ ಅಪಾರ ನಂಬಿಕೆ. ಊರಿನಲ್ಲಿ ಜರುಗುವ ಪ್ರತಿಯೊಂದು ಕಾರ್ಯಕಲಾಪಗಳಿಗೆ ಮಾರಿಯಲ್ಲಿ ಮೊರೆಹೋಗುತ್ತಾರೆ. ಹರಕೆ ಹೊರುತ್ತಾರೆ, ತಮ್ಮ ಇಷ್ಟಾರ್ಥಗಳು ಈಡೇರಿದಾಗ ಮಾರಮ್ಮನನ್ನು ಸಂತೋಷಿಸಲು ಹಬ್ಬ ಆಚರಣೆಗಳನ್ನು ಕೈಗೊಳ್ಳುತ್ತಾರೆ. ಈ ಹಬ್ಬಗಳಲ್ಲಿ ಕೊಂಡ ಹಾಯುವುದು, ಬಲಿ ಕೊಡುವುದು, ಕುಣಿಯುವುದು, ಹೀಗೆ ವಿವಿಧ ಸಂಪ್ರದಾಯ ಆಚರಣೆಗಳು ರೂಢಿಯಲ್ಲಿದೆ.

ಮಾರಿಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸಲಾಗುವ ಚಾಮರಾಜನಗರ ಜಿಲ್ಲೆಯ ಪ್ರಾದೇಶಿಕ ಕಲೆಗಳಲ್ಲಿ ಮಾರಿಕುಣಿತವು ಬಹಳ ಮಹತ್ವಪೂರ್ಣ ಸ್ಥಾನವನ್ನು ಪಡೆದುಕೊಂಡಿದೆ. ಈ ಕುಣಿತವು ಎರಡು ರೀತಿಯಲ್ಲಿ ಇರುತ್ತದೆ. ಬಲಿ ಕೊಡಲಾದ ಕೋಣನ ತಲೆಯನ್ನು ಹೊತ್ತು ಕುಣಿಯುತ್ತಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸೇರುವುದು. ಕೊಂಡ ಆಚರಣೆ, ಬಂಡಿ ಇತ್ಯಾದಿ ಆಚರಣೆಗಳು ಮುಗಿದ ನಂತರ ಮಾರಿಯ ಪ್ರತಿಮೆಯನ್ನು ಹೊತ್ತು ಕುಣಿಯುವುದು ಇನ್ನೊಂದು ಬಗೆಯದಾಗಿದೆ. ಜನಪದ ಸಾಹಿತ್ಯದ ಮೌಖಿಕ ಆಕರಗಳಾದ ಕಥೆ, ಗೀತೆ, ಲಾವಣಿ, ಗಾದೆ, ಒಗಟು ಇನ್ನೂ ಮೊದಲಾದವುಗಳಿಂದ ಮಾರಿಯ ಹುಟ್ಟು, ಆಚರಣೆ, ಬೆಳೆದು ಬಂದ ಬಗೆಗಳನ್ನು ತಿಳಿಯುವಲ್ಲಿ ಸಹಾಯಕವಾಗಿದೆ. ಮಾರಿಯ ಹುಟ್ಟಿನ ಮೂಲವನ್ನು ತಿಳಿಯುವಲ್ಲಿ ಅನೇಕ ಕಥೆಗಳು, ಪುರಾಣಗಳು, ಜನಪದ ಸಾಹಿತ್ಯದಲ್ಲಿ ವಿಫುಲವಾಗಿ ದೊರೆಯುತ್ತದೆ. ಅವುಗಳಲ್ಲಿ ಒಂದು ಕಥೆಯನ್ನು ಇಲ್ಲಿ ನೋಡಬಹುದು. ಬ್ರಾಹ್ಮಣ ಕುಟುಂಬಕ್ಕೆ ಸೇರಿದ ತಂದೆ ತಾಯಿಗಳಿಗೆ ಒಬ್ಬಳೆ ಮಗಳಾಗಿ ಹುಟ್ಟಿದವಳು ಶ್ರೀಬಾಲಗೌರಿ. ಅವರ ಮನೆಗೆ ಮಾದಿಗರ ಹುಡುಗನಾದ ಕರಿಯ ತನ್ನ ಮನೆಯನ್ನು ಬಿಟ್ಟು ಬಂದು ತಾನು ಬ್ರಾಹ್ಮಣನೆಂದು ಸುಳ್ಳು ಹೇಳಿ ಕರಿಯಂಭಟ್ಟನಾಗಿ ಸೇರಿಕೊಂಡಿರುತ್ತಾನೆ. ಹುಡುಗನ ಗುಣ ನಡತೆಯಿಂದ ಮೆಚ್ಚುಗೆಯಾಗಿ ಹುಡುಗ ಹುಡುಗಿಯರು ಪರಸ್ಪರ ಪ್ರೇಮಿಸಿ ಮದುವೆಯಾಗುತ್ತಾರೆ. ಬಹಳ ದಿನಗಳ ನಂತರ ಕರಿಯನ ತಾಯಿ ಮಗನನ್ನು ಹುಡುಕಿಕೊಂಡು ಬರುತ್ತಾಳೆ, ಕರಿಯ ತನ್ನ ತಾಯಿಯನ್ನು ನೋಡಿದ ಸಂತೋಷದ ಜೊತೆಗೆ ಆತಂಕಗೊಂಡು ನಡೆದ ವಿಷಯವನ್ನು ತಾಯಿಗೆ ತಿಳಿಸಿ ತಾನು ಕೂಡ ಬ್ರಾಹ್ಮಣತಿಯಂತಿರಬೇಕೆಂದು ಹೇಳಿ ಮನೆಗೆ ಕರೆದೊಯ್ಯುತ್ತಾನೆ. ಮನೆಯಲ್ಲಿ ಊಟಕ್ಕೆ ಕುಳಿತ ಸಂದರ್ಭದಲ್ಲಿ ಕುತೂಹಲಭರಿತನಾಗಿ ತನ್ನ ತಾಯಿಯನ್ನು ಊಟದ ರುಚಿ ಹೇಗಿದೆ ಎಂದು ಕೇಳುತ್ತಾನೆ. ಆಗ ಕರಿಯನ ತಾಯಿ ಹಿಂದೆ ಮುಂದೆ ಯೋಚಿಸದೆ "ನಮ್ಮದೊಂದು ಕೋಣನ ಕರುವಿನ ಹಾಲಿನ ಬೆಲೆಯಿಲ್ಲ" ಎಂದು ಹೇಳಿಯೇ ಬಿಡುತ್ತಾಳೆ. ಈ ಮಾತನ್ನು ಕೇಳಿದ ಸೊಸೆ ತಬ್ಬಿಬ್ಬಳಾಗಿ, ತಾನು ತನ್ನ ಗಂಡನಿಂದ ಮೋಸ ಹೋಗಿರುವ ಸಂಗತಿ ತಿಳಿಯಲಾಗಿ ಅವಳು ನೇರವಾಗಿ ತನ್ನ ತಂದೆ-ತಾಯಿಯ ಬಳಿ ಬಂದು "ನಾಯಿ ಮುಟ್ಟಿದ ಮಡಕೆಯನ್ನು ಏನು ಮಾಡಬೇಕೆಂದು" ಪ್ರಶ್ನಿಸುತ್ತಾಳೆ. ಆಗ ಅವರು ಪ್ರತ್ಯುತ್ತರವಾಗಿ ನಾಯಿಯ ಕೊರಳಿಗೆ

**Shikshan Sanshodhan : Journal of Arts, Humanities and Social Sciences** **ISSN: 2581-6241** **Volume - 3, Issue - 6, Nov-Dec – 2020**
**Bi-Monthly, Peer-Reviewed, Refereed, Indexed Journal** **Impact Factor: 3.589**
**Received on : 02/12/2020** **Accepted on : 18/12/2020** **Publication Date: 30/12/2020**

ಕಟ್ಟಬೇಕೆಂದು ಹೇಳುತ್ತಾರೆ. ತನ್ನ ತಂದೆ ತಾಯಿಯ ಮಾತನ್ನು ತಿಳಿದ ಶ್ರೀಬಾಲಗೌರಿಯು ಬೆಂಕಿಗೆ ಆಹುತಿಯಾಗುವ ನಿರ್ಧಾರ ಮಾಡುತ್ತಾಳೆ. ತನಗಾದ ಈ ದುರ್ಗತಿಯನ್ನು ನೆನೆದು ಅದಕ್ಕೆ ಪ್ರತೀಕಾರವಾಗಿ ತನ್ನ ಗಂಡನಿಗೆ ಶಾಪವನ್ನು ನೀಡುತ್ತಾಳೆ. ನಾನು ಮಾರಿಯಾಗಿ ಹುಟ್ಟುತ್ತೇನೆ, ನೀನು ಪಟ್ಟದ ಕೋಣನಾಗಿ ಹುಟ್ಟು ಮಟ್ಟಮಂಗಳವಾರ ರಾತ್ರಿಗೆ ನಿನ್ನ ಬಲಿ ತೆಗೆದುಕೊಳ್ಳುತ್ತೇನೆಂದು ಶಪಥಗೈದು ಆಹುತಿಯಾಗುತ್ತಾಳೆ. ಇದು ಮಾರಮ್ಮನ ಹುಟ್ಟಿನ ಬಗೆಗೆ ಇರುವ ಪ್ರಚಲಿತದಲ್ಲಿರುವ ಒಂದು ಕಥೆಯಾಗಿದ್ದು, ಇಂತಹ ಹಲವಾರು ಕಥೆಗಳನ್ನು ನಮ್ಮ ಜನಪದರು ವಿವಿಧ ಶೈಲಿಯಲ್ಲಿ ಮಾರಮ್ಮನ ಹುಟ್ಟು, ಹಬ್ಬ, ಆಚರಣೆ ಬಗೆಗೆ ತಿಳಿಸಿಕೊಡುವುದರಲ್ಲಿ ನಿಪುಣರಾಗಿದ್ದಾರೆ.

ಚಾಮರಾಜನಗರ ಪ್ರದೇಶದ ಸುತ್ತಮುತ್ತಲಿನ ಬಹುತೇಕ ಹಳ್ಳಿಗಳಲ್ಲಿ ವಿವಿಧ ಹೆಸರುಗಳಿಂದ ಮಾರಮ್ಮನ ಹಬ್ಬ, ಆಚರಣೆಗಳನ್ನು ಪ್ರತಿ ವರ್ಷಕ್ಕೊಮ್ಮೆ ಹಳ್ಳಿಯ ಎಲ್ಲಾ ಕೋಮಿನ ಜನರು ಸೇರಿ ಆಚರಿಸುವ ಪದ್ಧತಿಯನ್ನು ಇಂದಿಗೂ ಕಾಣಬಹುದು. ಉದಾಹರಣೆಗೆ: ದಂಡಿನಮಾರಮ್ಮ, ಬಿಸಿಲು ಮಾರಮ್ಮ, ಹಿಂಡಿ ಮಾರಮ್ಮ, ಮದ್ದೂರಮ್ಮ, ಮೂಗೂರು ಮಾರಮ್ಮ, ಕಿಚ್‌ಗುತ್ತಿ ಮಾರಮ್ಮ, ಕಾಳಮ್ಮ, ಇತ್ಯಾದಿ, ಅದರಂತೆ ಜಿಲ್ಲೆಯ ಹೃದಯ ಭಾಗವಾದ ಕೊಳ್ಳೇಗಾಲ ತಾಲ್ಲೂಕಿನ ಬಹುಪಾಲು ಹಳ್ಳಿಗಳಲ್ಲೂ ಸಹ ಮಾರಮ್ಮನ ಹಬ್ಬ, ಆಚರಣೆಗಳನ್ನು ಹೇರಳವಾಗಿ ಕಾಣಬಹುದು. ಅಲ್ಲದೆ ಜನಪದ ಸಾಂಸ್ಕೃತಿಕ ನಾಯಕರಾದ ಮಲೆಮಾದೇಶ್ವರ, ಮಂಟೇಸ್ವಾಮಿಯವರ ನೆಲೆಬೀಡಾದ ಈ ಪ್ರದೇಶದಲ್ಲಿ ಕಂಡಾಯೋತ್ಸವ, ಜಾತ್ರಾ ಮಹೋತ್ಸವಗಳ ಸಂದರ್ಭಗಳಲ್ಲಿಯೂ ಸಹ ಮಾರಿ ಕುಣಿತವನ್ನು ಒಂದು ಪ್ರದರ್ಶನ ಕಲೆಯಾಗಿ, ಮನರಂಜನಾತ್ಮಕ ಕುಣಿತವನ್ನಾಗಿ ರೂಢಿಸಿ ಕೊಂಡಿರುವುದನ್ನು ಕಾಣಬಹುದು. ರಾಜ್ಯದ ಪ್ರಮುಖ ಧಾರ್ಮಿಕ ಕ್ಷೇತ್ರಗಳ ಪಟ್ಟಿಯಲ್ಲಿ ಪ್ರವಾಸಿ ತಾಣವಾಗಿಯೂ, ಪುಣ್ಯಕ್ಷೇತ್ರಗಳ ನೆಲೆಬೀಡಾಗಿಯೂ ಜನಮನ್ನಣೆಯನ್ನು ಪಡೆದು ಕೊಂಡಿರುವುದು ಈ ಜಿಲ್ಲೆಯ ಹಿರಿಮೆಯಾಗಿದೆ. ಈ ಪುಣ್ಯಕ್ಷೇತ್ರಗಳ ಜಾತ್ರಾಮಹೋತ್ಸವಗಳ ಸಂದರ್ಭದಲ್ಲಿ ಕಂಡುಬರುವ ಮಾರಿಕುಣಿತವು ಸಹ ಪುಣ್ಯಕ್ಷೇತ್ರಗಳಷ್ಟೆ ಮಹತ್ವವನ್ನು ಪಡೆದುಕೊಂಡಿರುವುದರಿಂದ ಈ ಕುಣಿತವನ್ನು ಪಾದೇಶಿಕವಾಗಿ ಗುರುತಿಸುವ ಮೂಲಕ "ಕೊಳ್ಳೇಗಾಲದ ಮಾರಿಕುಣಿತ"ವೆಂದೇ ಪ್ರಖ್ಯಾತಿಯನ್ನು ಪಡೆದುಕೂಂಡಿದೆ. ಈ ಕುಣಿತವನ್ನು ಇನ್ನಿತರ ಪ್ರದೇಶಗಳಲ್ಲೂ ಸಹ ಕಾಣಬಹುದಾದರೂ ಇಲ್ಲಿ ಒಂದು ಅಥವಾ ಎರಡು ಬಗೆಯ ಕುಣಿತವನ್ನು ಮಾತ್ರ ನೋಡಬಹುದು. ಕೊಳ್ಳೇಗಾಲ ಪ್ರದೇಶದಲ್ಲಿ ಕಂಡುಬರುವ ಮಾರಿಕುಣಿತ ಪ್ರಮುಖವಾಗಿ ಹೆಜ್ಜೆಗಳ ಗತ್ತನ್ನೇ ಅವಲಂಭಿಸಿದ್ದರೂ ಕೂಡ ಈ ಕುಣಿತದಲ್ಲಿ ಸುಮಾರು ಎರಡರಿಂದ ಹತ್ತು ಬಗೆಯ ಕುಣಿತವನ್ನು ಈ ಭಾಗದ ಜನರು ಏಕಕಾಲದಲ್ಲಿ ಪ್ರದರ್ಶನ ಪಡಿಸುವುದು ನೋಡುಗರ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತದೆ. ಅಲ್ಲದೇ ಮಹಿಳೆಯರು, ಮಕ್ಕಳು ಕೂಡ ಈ ಕುಣಿತದಲ್ಲಿ ಪಾಲ್ಗೊಳ್ಳುವುದು ಒಂದು ವಿಶೇಷವಾಗಿದೆ.

ಮಾರಮ್ಮನ ಹಬ್ಬ ಆಚರಣೆಗಳು ಸಂಪೂರ್ಣವಾಗಿ ದಲಿತರಿಗೆ ಸೇರಿದ್ದು, ಗ್ರಾಮಗಳ ಹಿತದೃಷ್ಟಿಯಿಂದ ಇತರ ಕೋಮಿನ ಜನರು ಸಹ ಮಾರಮ್ಮನ ಹಬ್ಬವನ್ನು ಆಚರಣೆ ಮಾಡುವುದನ್ನು ಕೆಲವು ಹಳ್ಳಿಗಳಲ್ಲಿ ಮಾತ್ರ ಕಾಣಬಹುದಾಗಿದೆ. ಈ ಸಂದರ್ಭದಲ್ಲಿ ಮಾರಮ್ಮನಿಗೆ ಕುರಿ, ಕೋಳಿ, ಆಡು, ಕೋಣಗಳನ್ನು ಬಲಿಕೊಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೆ ತಂಬಿಟ್ಟಿನ ಆರತಿ, ಬೇವಿನ ಸೊಪ್ಪಿನ ಸೇವೆ, ಮುಡಿ ಸೇವೆ, ನಿಂಬೆಹಣ್ಣಿನ ಹಾರಗಳನ್ನು ಅರ್ಪಿಸುವುದು, ಉರುಳು ಸೇವೆ, ಇನ್ನೂ ಮುಂತಾದ ಆಚರಣೆಗಳು ನಡೆಯುತ್ತವೆ. ಇಂತಹ ವೇಳೆಯಲ್ಲಿ ಗುಡಿಯ ಬಯಲಿನಲ್ಲಿ ಕಾಲಿಗೆ ಗೆಜ್ಜೆ ಕಟ್ಟಿ, ನಡುವಿಗೆ ಬಟ್ಟೆ ಸುತ್ತಿ, ಮಾರಮ್ಮನಿಗೆ ಪ್ರಿಯವಾದ ಬೇವಿನ ಸೊಪ್ಪನ್ನು ಕೈಯಲ್ಲಿ ಹಿಡಿದು, ನಿಂಬೆಹಣ್ಣಿನ ಹಾರವನ್ನು ಕೊರಳಿಗೆ ಧರಿಸಿ, ತಮಟೆ, ನಗಾರಿಗಳ ಸದ್ದಿನ ಗತ್ತಿಗೆ ತಕ್ಕಂತೆ ಹತ್ತಾರು ಜನ ಸಾಲುಗಟ್ಟಿ ಒಟ್ಟಿಗೆ ಕುಣಿಯುವ ಕುಣಿತವನ್ನು ನೋಡುವುದು ಬಹಳ ರೋಮಾಂಚನಕಾರಿಯಾದುದು. ಈ ಕುಣಿತದಲ್ಲಿ ಮಾರಿಯನ್ನು ಪೂಜಿಸುವ ಪೂಜಾರಿಯು ಸಹ ಆವೇಷದಿಂದ ಹೆಜ್ಜೆ ಹಾಕುವುದನ್ನು ನೊಡಬಹುದಾಗಿದೆ. ಆಗ ಜನರು ಮಾರಮ್ಮನನ್ನು ಸಂತೋಷಿಸಲು ಆಕೆಯನ್ನು ಹೊಗಳುವ ಹಾಡುಗಳನ್ನು ಹಾಡುವುದರೊಂದಿಗೆ ತಮಟೆ ನಗಾರಿಗಳ ಸದ್ದಿನ ಗತ್ತಿಗೆ ವಿವಿಧ ರೀತಿಯ ಹೆಜ್ಜೆಗಳನ್ನು ಹಾಕುವುದನ್ನು ಕಾಣಬಹುದಾಗಿದೆ. ಅವುಗಳು ಈ ಕೆಳಗಿನಂತಿವೆ.

ಮಾರವ್ವ ಹೊಯ್ತಾಳೆ ಮಾರವ್ವ ಹೊಯ್ತಾಳೆ
ಮಳವಳ್ಳಿ ಸೀಮೆಗೆ
ಮಳ ಬಂದವ್ರೆಲ್ಲ ತಳಗಿರೋ । ಮಾರವ್ವ
ನಿನ್ನ ಎಳೆಯ ಹೊಂಬಾಳೆ ಸುಳಿಯಲ್ಲಿ ।

ಮಾರಿತ ಗುಡಿಸುತ್ತಾ ಯಾರ್‍ಯಾರು ಕುಣಿದಾರೋ
ಮಾರಿಯ ಮಕ್ಕ ಮರಮಕ್ಕ । ಕುಣಿದಾರೆ
ಮಾರಿಗುಡಿಯೆಲ್ಲಾ ಮೊಳಗೀತೋ।

ಮತ್ತೊಂದು ಹಾಡು
ಎಲ್ಲುಕಾಣೆ ಎಲ್ಲುಕಾಣೆ ಮಾರವ್ವನಂತವಳು // ಎಲ್ಲುಕಾಣೆ //
ಬಿಂದಿಗೆ ಒಲಿಯುವವಳೆ ಬಿಂದಿ ಮ್ಯಾಲೆ ಕುಣಿಯೋಳೆ
ಬಿಂದಿಗೆ ಮ್ಯಾಲೆ ಕುಣಿಯೋಳೆ ನಲಿಯೋಳೆ
ಎಲ್ಲುಕಾಣೆ ಎಲ್ಲುಕಾಣೆ ಮಾರವ್ವನಂತವಳ // ಎಲ್ಲುಕಾಣೆ //

ಅಂದದ ಮೊಗದೊಳೆ ಚೆಂದದ ಗಣಿಯೊಳೆ
ತೇರಿನಮ್ಯಾಲ ನಳಿಯೊಳೆ ಮಾರವ್ವ
ಏಳು ಮಾರವ್ವ ಎಷ್ಟೊತ್ತು ಸುಖನಿದ್ದುರ
ಬೇಡಿ ಬಂದಾವ್ರೆ ನಿನ ಭಕ್ತರ ದಿಂಡು

Shikshan Sanshodhan : Journal of Arts, Humanities and Social Sciences ISSN: 2581-6241 Volume - 3, Issue - 6, Nov-Dec – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 02/12/2020 Accepted on : 18/12/2020 Publication Date: 30/12/2020

ಹೀಗೆ ಇನ್ನೂ ಹಲವಾರು ಬಗೆಯ ಹಾಡುಗಳನ್ನು ನಮ್ಮ ಜನಪದರು ಹಾಡುತ್ತಾರೆ, ವಿವಿಧ ಬಗೆಯ ಹಾಡುಗಳನ್ನು ಮಾತ್ರವಲ್ಲದೇ ಬಗೆ ಬಗೆಯ ವಿಧಾನದ ಮೂಲಕ ಒಂದೇ ಬಾರಿಗೆ ಹೆಜ್ಜೆಯನ್ನು ಹಾಕುವುದರೊಂದಿಗೆ ಮಾರಿಕುಣಿತದ ವಿಶೇಷತೆಯನ್ನು ಅರಿಯಲು ಸಹಾಯಕವಾಗಿದೆ. ಮಾರಿಕುಣಿತದ ಕಲಾವಿದರು ಅನುಸರಿಸುವ ವಿಧಾನವನ್ನು ಈ ಕೆಳಗಿನಂತೆ ನೋಡಬಹುದು.

**ಒಂದು ಹೆಜ್ಜೆಯ ಮಾರಿಕುಣಿತ** : ಈ ಕುಣಿತವನ್ನು ರಂಗದ ಕುಣಿತ, ರಂಗಕಟ್ಟುವುದು, ರಂಗಒಪ್ಪಿಸುವುದು ಎಂಬಿತ್ಯಾದಿ ನಾಮದೇಯಗಳಿಂದ ಕರೆಯಲಾಗುತ್ತದೆ. ಬಲದ ಕಾಲಿನಿಂದ ಒಂದು ಹೆಜ್ಜೆಯನ್ನು ಹಾಕುತ್ತಾ, ಹಿಂದಕ್ಕೆ ಮುಂದಕ್ಕೆ ಕಾಲನ್ನು ಕುಣಿಸುತ್ತಾ ನಡು ಬೆನ್ನುಗಳನ್ನು ಭಾಗಿಸಿ–ತಗ್ಗಿಸಿ, ಕೈಯನ್ನು ಮೇಲೆಕ್ಕೆ ಎತ್ತಿ, ಮಾರಮ್ಮನನ್ನು ಹೊಗಳುತ್ತಾ, ವರಗಳನ್ನು ಬೇಡುತ್ತಾ ಮಾರಮ್ಮನನ್ನು ಹುರಿದುಂಬಿಸುವಂತೆ ಉಲೇಲೂ. ಉಲೇಲೂ.. ಉಲೇಲೂ... ಉಲೇಲೂ.... ಎಂದು ಕಿರುಚುತ್ತಾ ಕುಣಿಯುವುದರಿಂದ ಮಾರಿಯನ್ನು ಸಂತೋಷಿಸುತಿದ್ದೇವೆಬುಂದು ನಮ್ಮ ಜನಪದರ ನಂಬಿಕೆಯಾಗಿದೆ. ಹೀಗೆ ಎರಡು ಹೆಜ್ಜೆ ಕುಣಿತ, ಮೂರು ಹೆಜ್ಜೆ ಕುಣಿತ, ನಾಲ್ಕು ಹೆಜ್ಜೆ ಕುಣಿತ ಎಂಬುದಾಗಿ ಹೆಜ್ಜೆಗಳ ಕುಣಿತವು ಲೆಕ್ಕವಿಲ್ಲದೇ ಸಾಗುತ್ತಿರುತ್ತದೆ. ಒಂದೊಂದು ಬಗೆಯ ಹೆಜ್ಜೆಯ ಕುಣಿತವು ಬಹಳ ವಿಶಿಷ್ಟವಾಗಿದ್ದು. ಹೆಜ್ಜೆಗೆ ತಕ್ಕಂತೆ ಕುಣಿಯುವವರ ಆವಾಭಾವವು ಬದಲಾಗುತ್ತಿರುತ್ತದೆ. ತಮಟೆ ನಗಾರಿಗಳ ಸದ್ದು ಕೂಡ ಹೆಜ್ಜೆಗೆ ತಕ್ಕಂತೆ ಬದಲಾವಣೆಗೊಳ್ಳುವುದು ನೋಡುಗರ ಮೈಮನಗಳನ್ನು ಸಹ ಕುಣಿಯುವಂತೆ ಪ್ರೇರೇಪಿಸುತ್ತವೆ.

**ಕೋಲಾಟದ ಕುಣಿತ :** ಈ ಕುಣಿತವನ್ನು ಕೊಳ್ಳೇಗಾಲದ ಕೆಲವು ಹಳ್ಳಿಗಳಲ್ಲಿ ನೋಡಬಹುದಾಗಿದೆ. ಇದನ್ನು ಕಡ್ಡಿ ಕುಣಿತ, ದೊಣ್ಣೆ ಕುಣಿತ ಎಂದು ನಮ್ಮ ಜನಪದರು ಆಡು ಭಾಷೆಯಿಂದ ಕರೆಯುತ್ತಾರೆ. ಮಾರಮ್ಮನು ದೇವಸ್ಥಾನದ ರಂಗವನ್ನು ಪ್ರವೇಶಿಸುವ ಮೊದಲು ಕೋಲಾಟದ ಮೂಲಕ ದೇವಾಲಯವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ ನಂತರ ರಂಗದ ಮುಂದೆ ವೃತ್ತಾಕಾರವಾಗಿ ಕೋಲಾಟವನ್ನು ಪ್ರಾರಂಭಿಸುವ ಮೂಲಕ ಮಾರಮ್ಮನ ಭಕ್ತಿಗೆ ಪಾತ್ರರಾಗುತ್ತಾರೆ. ಇದು ಅಪರೂಪದ ಕುಣಿತವಾದ್ದರಿಂದ ಕೆಲವು ಮಾರಮ್ಮನ ಹಬ್ಬಗಳಲ್ಲಿ ಈ ಕುಣಿತವನ್ನು ಹೆಜ್ಜೆ ಕುಣಿತಕ್ಕೂ ಮೊದಲು ಕೋಲಾಟದ ಕುಣಿತವನ್ನು ಆರಂಭಿಸುವುದು ಕೆಲವೊಂದು ಹಳ್ಳಿಗಳ ಸಂಪ್ರದಾಯಬದ್ಧ ಆಚರಣೆಯಾಗಿದೆ. ಈ ಕುಣಿತವನ್ನು ನೋಡಲು ಜನಸಾಗರವೇ ನೆರೆದಿರುತ್ತದೆ. ಕುಣಿತದಲ್ಲಿ ಪಾಲ್ಗೊಳ್ಳುವವರು ಸರ್ವೆ ಸಾಮಾನ್ಯವಾದ ಉಡುಪನ್ನು ಧರಿಸುತ್ತಾರೆ. ಕಾಲಿಗೆ ಗೆಜ್ಜೆ, ಹಣೆಗೆ ಕುಂಕುಮ, ಕೊರಳಿಗೆ ಹೂವಿನ ಹಾರವನ್ನು ಧರಿಸಿಕೊಂಡು, ಕೈಯಲ್ಲಿ ತನ್ನ ಶಕ್ತಿಗೆ ಹಿಡಿಯುವಷ್ಟು ಗಾತ್ರದ ದೊಣ್ಣೆಯನ್ನು ಬಣ್ಣದಿಂದ ಅಲಂಕರಿಸಿರುತ್ತಾರೆ. ಕೆಲವರು ಬಣ್ಣವನ್ನು ಬಳಿಯುವುದಿಲ್ಲ. ಈ ಮಾರಿ ಕುಣಿತದಲ್ಲಿ ಎರಡು ವೃತ್ತಾಕಾರವನ್ನು ರಚಿಸಿಕೊಂಡು ಜೋಡಿ ಜೋಡಿಗಳಾಗಿ ಒಬ್ಬನ ಕೋಲಿಗೆ, ಮತ್ತೊಬ್ಬನು ತಾಗಿಸುತ್ತಾ ಕೋಲಿನ ಸದ್ದಿಗೆ ಹೆಜ್ಜೆಯನ್ನು ಹಾಕುತ್ತಾ ಕೋಲಾಟದ ಕುಣಿತವನ್ನು ಪ್ರಾರಂಭಿಸುತ್ತಾರೆ. ಈ ಕುಣಿತವನ್ನು ಬಹಳ ಜಾಗರೂಕತೆಯಿಂದ, ಭಕ್ತಿಯಿಂದ ಕುಣಿಯಬೇಕಾಗುತ್ತದೆ, ಏಕೆಂದರೆ ಅಜಾಗರೂಕತೆಯಿಂದ ಕೋಲಿನ ತಾಳವು ತಪ್ಪಿದರೆ ತನಗೆ ಜೋಡಿಯಾಗಿ ಕೋಲನ್ನು ಹಾಕುವ ವ್ಯಕ್ತಿಗೆ ಹೊಡೆಯಬೇಕಾಗುತ್ತದೆ. ಏನಾದರೂ ತಪ್ಪಿದರೆ ಮಾರಮ್ಮ ಮುನಿದಿದ್ದಾಳೆಂದು, ಗ್ರಾಮದ ಜನರಿಗೆ ಕೆಡಕುಂಟಾಗುತ್ತದೆ ಎಂದು ಜನಪದರು ನಂಬುತ್ತಾರೆ.

**ಉಪಸಂಹಾರ :**

ಒಟ್ಟಾರೆಯಾಗಿ ಹೇಳುವುದಾದರೆ ಚಾಮರಾಜನಗರ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾದ ಕೋಳ್ಳೇಗಾಲದಲ್ಲಿ ಜರುಗುವ ಜಾತ್ರೆ ಮತ್ತು ಹಬ್ಬಗಳಲ್ಲಿ ಮಾರಿಕುಣಿತವು ತನ್ನದೇ ಆದ ವಿಶಿಷ್ಟತೆಯನ್ನು ಒಳಗೊಂಡಿದೆ. ಈ ತಾಲ್ಲೂಕು ಮತ್ತಷ್ಟು ಪ್ರಖ್ಯಾತಿಯಾಗಲು ಮಾರಿಕುಣಿತದ ಕೊಡುಗೆಯು ಸಹ ಇದೆ. ಇತ್ತಿಚಿನ ದಿನಗಳಲ್ಲಿ ಈ ಕುಣಿತವು ಗ್ರಾಮೀಣ ಪ್ರದೇಶಗಳಲ್ಲಿ ಕಣ್ಮರೆಯಾಗುತ್ತಿದ್ದು, ಜನರು ಆಧುನಿಕರಣಕ್ಕೆ ಮೈವೊಡ್ಡಿ ಸಿನಿಮಾ ಹಾಡುಗಳಿಗೆ ಮಾರಿಕುಣಿತವನ್ನು ಸಂಯೋಜಿಸಿಕೊಂಡು ತಮಗೆ ಬೇಕಾದಂತೆ ಕುಣಿಯುವುದನ್ನು ಕಾಣುತಿದ್ದೆವೆ. ಅದರಂತೆ ನಗರ ಪ್ರದೇಶಗಳಲ್ಲಿ ಡಿಜೆಯಾಗಿ ಕಂಡುಬರುವುದು ಇದರ ಜನಪ್ರಿಯತೆಯನ್ನು ಎತ್ತಿ ಹಿಡಿಯುತ್ತದೆ.

**ಆಧಾರ ಗ್ರಂಥಗಳು :**


1. ರಾಜಶೇಖರ ಜಮದಂಡಿ. ಚಾಮರಾಜನಗರ ಜಿಲ್ಲೆಯ ಜಾತ್ರೆ ಮತ್ತು ಹಬ್ಬಗಳು. ವಿಸ್ತರಣೆ ಹಾಗು ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಹಾವೇರಿ. 2017
2. ಮಹದೇವ ಶಂಕರಪುರ. ಕೋಳ್ಳೇಗಾಲ ತಾಲ್ಲೂಕಿನ ಜಾತ್ರೆಗಳು ಮತ್ತು ಹಬ್ಬಗಳು' ಹೊನ್ನು ಹೊಳೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜನಗರ, 2007
3. ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಸಂಸ್ಥೆ (2011) ಜಾನಪದ ಮತ್ತು ಜಾನಪದ ಕಲೆಗಳು Retrieved dated on 29-10-2020, Retrieved from https://shastriyakannada.org/Folklore%20and%20Folk%20ArtsKan.html
4. ಹಿ ಚಿ ಬೋರಲಿಂಗಯ್ಯ (ಸಂ) ಕರ್ನಾಟಕ ಜಾನಪದ ಕಲೆಗಳ ಕೋಶ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 1996.
5. ಚಾಮರಾಜನಗರ ಜಿಲ್ಲಾ ಗ್ಯಾಸಿಟಿಯರ್
6. Wikipedia (2020) Kollegal. Retrieved on 02/12/2020 Retrieved from https://en.wikipedia.org/wiki/Kollegal